ತುರುವೇಕೆರೆ ವಿದ್ಯುತ್ ಪ್ರಸರಣ ನಿಗಮದ ಬಗ್ಗೆ

31(21) -ಶ್ರೀ ಲಕ್ಷ್ಮೀನಾರಾಯಣ ಎಂ.ಡಿ ಆಣ್ಣಯ್ಯ (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಕೆ.ಪಿ.ಟಿ.ಸಿ.ಎಲ್.ನ ಕಛೇರಿಯಲ್ಲಿ ಲೈನ್‌ಮೆನ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಗ್ರಾಮಾಂತರ ಹಳ್ಳಿಗಳಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ನೋಡಿಕೊಳ್ಳಲು ಲೈನ್‌ಮನ್‌ಗಳನ್ನು ನಿಯೋಜಿಸಲಾಗುವುದೇ;

ಇ) ಕೊರತೆ ಇರುವ ಲೈನ್‌ಮನ್‌ಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೊಸ ನೇಮಕಾತಿ ಇಲ್ಲದಿರುವುದರಿಂದ ನಿವೃತ್ತಿ ನೌಕರರ ಜಾಗಗಳು ಖಾಲಿ ಉಳಿಯುತ್ತಿರುವುದರಿಂದ ಲೈನ್‌ಮನ್‌ಗಳ ಕೊರತೆ ಸ್ವಲ್ಪ ಮಟ್ಟಿಗೆ ಇದೆ.

ಆ) ಲೈನ್‌ಮನ್‌ಗಳ ಕೊರತೆಯನ್ನು ಸರಿದೂಗಿಸಲು ತಾತ್ಕಾಲಿಕ ಆಧಾರದ ಮೇಲೆ ಗ್ಯಾಂಗ್‌ಮನ್‌ಗಳನ್ನು ತೆಗೆದುಕೊಂಡು ವಿದ್ಯುತ್ ಸರಬರಾಜು ಸಮರ್ಪಕವಾಗಿ ನೀಡಲು ನಿಯೋಜಿಸಲಾಗಿದೆ.

ಇ) ತಾತ್ಕಾಲಿಕ ಗ್ಯಾಂಗಮನ್‌ಗಳನ್ನು ನೇಮಿಕೊಂಡು ವಿದ್ಯುತ್ ಪೂರೈಕೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕ ಸಂಪಿಗೆ ವ್ಯಾಪ್ತಿಯಲ್ಲಿ ವಿದ್ಯುತ್ ಉಪ ಸ್ಥಾವರ ನಿರ್ಮಾಣ

32(22) -ಶ್ರೀ ಲಕ್ಷ್ಮೀನಾರಾಯಣ ಎಂ.ಡಿ ಆಣ್ಣಯ್ಯ (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದಂಡಿನ ಶಿವರ ಹೋಬಳಿ ಸಂಪಿಗೆ ಬಳಿ ರಾಘದೇವನಾಲ ಸರ್ವೆ ನಂಬರ್‌ನಲ್ಲಿ ವಿದ್ಯುತ್ ಉಪಸ್ಥಾವರ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಗುವುದು;

ಆ) ಈ ವರ್ಷ ಪ್ರಾರಂಭ ಮಾಡಲಾಗುವುದೇ?

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನ ಸಂಪಿಗೆಯಲ್ಲಿ ಒಂದು 110:11 ಕೆ.ವಿ., 1 10 ಎಂ.ವಿ.ಎ. ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಿತ ಉಪ ಕೇಂದ್ರಕ್ಕೆ ತಾಂತ್ರಿಕ ಸಮಿತಿಯು ಅನುಮೋದನೆ ನೀಡಿದ್ದು, ಉಪ ಕೇಂದ್ರಕ್ಕೆ ಬೇಕಾಗುವ ಭೂಮಿಯನ್ನು ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಅ) ಭೂ ಸ್ವಾಧೀನ ಮತ್ತು ಸರ್ವೆ ಕೆಲಸಗಳು ಪೂರ್ಣಗೊಂಡ ನಂತರ ವಿವರವಾದ ಯೋಜನಾ ವರದಿಯನ್ನು ತಯಾರಿಸಿ, ನಿಗಮದ ಆಡಳಿತಾತ್ಮಕ ಅನುಮೋದನೆ ಪಡೆದ ಕೂಡಲೇ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

ತುರುವೇಕೆರೆ ಪಟ್ಟಣ ಪಂಚಾಯ್ತಿಯನ್ನು ಐ.ಡಿ.ಎಸ್. ಎಂ.ಟಿ.ಗೆ. ಸೇರಿಸುವುದು

33(24) -ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೆಕೆರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೆಕೆರೆ ಪಟ್ಟಣ ಪಂಚಾಯಿತಿಯನ್ನು ಈ ವರ್ಷ ಐ.ಡಿ.ಎಸ್.ಟಿ.ಎಂ.ಗೆ ಸೇರಿಸಲಾಗುವುದೇ?

ಆ) 2001-2002ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ನಗರ ಪಟ್ಟಣಗಳು ಈ ಯೋಜನೆಯಡಿ ಸೇರಿವೆ?

ಇ) ಐ.ಡಿ.ಎಸ್.ಟಿ. ಎಂ.ಟಿ.ಗೆ ಸೇರಿಸಲು ಯಾವ ಕ್ರಮವನ್ನು ಅನುಸರಿಸಲಾಗುವುದು?

ಶ್ರೀ ಡಿ.ಎಸ್. ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು).

ಅ) ಮುಂದಿನ ರಾಜ್ಯ ಮಟ್ಟದ ಮಂಜೂರಾತಿ ಸಭೆಯಲ್ಲಿ ಮಂಡಿಸಿ ಈ ಪಟ್ಟಣವನ್ನು ಐ.ಡಿ.ಎಸ್.ಟಿ.ಎಂ.ಗೆ ಸೇರಿಸಲು ಕ್ರಮ ಜರುಗಿಸಲಾಗುವುದು.

ಆ) ಹಳಿಯಾಳ, ಬಂಟ್ವಾಳ, ಮೂಡಬಿದಿರಿ ನೆಲಮಂಗಲ, ಆಳ್ನಾವರ ಅಣ್ಣೀಗೇರಿ, ನರಗುಂದ, ಹೊಸದುರ್ಗ, ಬಳ್ಳಾರಿ, ಉಡುಪಿ, ಬಾಗಲಕೋಟೆ, ಹುಮ್ನಾಬಾದ್, ಬಸವನ ಬಾಗೇವಾಡಿ, ಚಳ್ಳಗೆರೆ, ನಂಜನಗೂಡು, ಮುಂಡಗೋಡ್, ಬಾಗೇಪಲ್ಲಿ.

ಇ) ಐ.ಡಿ.ಎಸ್.ಟಿ ಎಂ.ಟಿ ಯೋಜನೆಗೆ ಸೇರಿಸಲು ಕೇಂದ್ರ ಸರ್ಕಾರವು ನೀಡಿರುವ ಮಾರ್ಗದರ್ಶಿಯನ್ನು ಅನುಸರಿಸಿ ರಾಜ್ಯ ಮಟ್ಟದ ಮಂಜೂರಾತಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗುವುದು.

ಭಟ್ಕಳ ತಾಲ್ಲೂಕಿನಲ್ಲಿ ಇರತಕ್ಕ ಸಿಎಲ್ - 2 ಸಿವಿಲ್.2 ಹಾಗೂ ಸಿಎಲ್-9 ಬಗ್ಗೆ ಮಾಹಿತಿ

34(59) -ಶ್ರೀ ನಾಯಕ್ ಜೆಡಿ ಭಟ್ಕಳ: ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ತಾಲ್ಲೂಕಿನಲ್ಲಿ ಇರತಕ್ಕ ಸಿಎಲ್-2 ಸಿಎಲ್-7 ಹಾಗೂ ಸಿಎಲ್-9 ರ ಪರವಾನಗಿದಾರರ ಹೆಸರು ಹಾಗೂ ಮಾಹಿತಿ ಒದಗಿಸುವುದು.

ಆ) ಭಟ್ಕಳ ತಾಲ್ಲೂಕಿನಲ್ಲಿ ಸಿಎಲ್-2 ಪರವಾನಗಿದಾರರು ಬಾರ್ ಮತ್ತು ರೆಸ್ಟೋರೆಂಟ್ ರೀತಿ ವ್ಯವಹಾರ ನಡೆಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ?